ಓ.ಎಸ್. ನಂಃ 276/2019
ಡಿ.ಡಬ್ಲ್ಯೂ-1 (ಬಸವರಾಜ)

ದಿನಾಂಕ: 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಆರ್.ಎಮ್.ಬಿ. ವಾದಿ ಪರ ವಕೀಲರಿಂದಃ</u>**

ನನ್ನ ಅಜ್ಜನ ಹೆಸರು ಸತ್ತೆಪ್ಪ ಎಂದರೆ ಸರಿ. ಸತ್ತೆಪ್ಪ ಇವರ ಅಣ್ಣನ ಹೆಸರು ದೊಡ್ಡಅಜ್ಜ ವೀರುಪಾಕ್ಷಿ. ನನ್ನ ಅಜ್ಜ ಸತ್ತೆಪ್ಪ ಇವರ ತಂದೆಯ ಹೆಸರು ಬಸಪ್ಪ. ಸದರಿ ಬಸಪ್ಪ ಇವರಿಗೆ ನನ್ನ ಅಜ್ಜ ಸತ್ತೆಪ್ಪ ಮತ್ತು ವೀರುಪಾಕ್ಷಿ ಖಾಸ ಮಕ್ಕಳು ಎಂದರೆ ಸರಿ. ನನ್ನ ತಂದೆ ಸತ್ತೆಪ್ಪ ಇವರಿಗೆ ವಾದಿ, ಪ್ರತಿವಾದಿ 9, ಮೃತ ಶಿವಲಿಂಗಪ್ಪ ಮತ್ತು ಮೃತ ಸಿದ್ದಪ್ಪ ಖಾಸ ಮಕ್ಕಳು ಎಂದರೆ ಸರಿ. ನನ್ನ ಅಜ್ಜ ಸತ್ತೆಪ್ಪ ಇವರಿಗೆ ಮೇಲೆ ಹೇಳಿದ ನಾಲ್ಕು ಜನರನ್ನು ಹೊರತುಪಡಿಸಿ 1ನೇ ಪ್ರತಿವಾದಿ ನನ್ನ ಅಜ್ಜಿಯು ಸಹ ನನ್ನ ಅಜ್ಜನ ವಾರಸುದಾರರು ಎಂದರೆ ಸರಿ.

2. ನನ್ನ ತಂದೆ ಶಿವಲಿಂಗಪ್ಪ ಇವರು ಮೃತಪಟ್ಟು ಈಗ 20 ವರ್ಷ ಮೇಲಾಗಿದೆ. ನನ್ನ ತಂದೆಗೆ ನನ್ನ ತಾಯಿ ರತ್ನವ್ವ, ನಾನು ಮತ್ತು 3ನೇ ಪ್ರತಿವಾದಿ ಸರಳ ವಾರಸುದಾರರು ಎಂದರೆ ಸರಿ. ನನ್ನ ತಂದೆ ಮೃತಪಟ್ಟಾಗ ನನಗೆ 01 ರಿಂದ ಒಂದುವರೆ ವರ್ಷ ವಯಸ್ಸಾಗಿತ್ತು ಎಂದರೆ ಸರಿ. 3ನೇ ಪ್ರತಿವಾದಿಗೆ 03ವರ್ಷ ಆಗಿರಬಹುದು ಎಂದರೆ ಸರಿ. ನನ್ನ ಚಿಕ್ಕಪ್ಪ ಸಿದ್ದಪ್ಪ ಮೃತಪಟ್ಟು ಈಗ 4-5 ವರ್ಷಗಳಾಗಿದೆ. ಸದರಿಯವರಿಗೆ ಪ್ರತಿವಾದಿ 5 ರಿಂದ 8 ವಾರಸುದಾರರು ಎಂದರೆ ಸರಿ. 9ನೇ ಪ್ರತಿವಾದಿ ನನ್ನ ಅಜ್ಜಿ 1ನೇ ಪ್ರತಿವಾದಿಯ ಜೊತೆ ಇರುತ್ತಾರೆ ಎಂದರೆ ಸರಿ. 9ನೇ ಪ್ರತಿವಾದಿಯು ದೈಹಿಕವಾಗಿ ಅಸ್ವಸ್ತರಿದ್ದಾರೆ ಎಂದರೆ ಸರಿ.

3. ದಾವಾ ಆಸ್ತಿಗಳಾದ ಸರ್ವೆ ನಂ.97, 384/4ಬ+9ಅ ಹಾಗೂ 493/1 ನಮ್ಮ ಅಜ್ಜ ಸತ್ತೆಪ್ಪನಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ನನ್ನ ಅಜ್ಜ ಸತ್ತೆಪ್ಪ ಹಾಗೂ ಅವರ ಅಣ್ಣ ವೀರುಪಾಕ್ಷಿ ಇವರ ನಡುವೆ ಪಾಲು ಆದಾಗ ದಾವಾ ಆಸ್ತಿಗಳು ನನ್ನ ಅಜ್ಜ ಸತ್ತೆಪ್ಪನ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಅದೇ ರೀತಿ ಮುತ್ನಾಳ ಗ್ರಾಮದಲ್ಲಿರುವ ಮನೆ ಜಿ.ಪಿ.ಸಿನಂ.59/ಎ, 59/1ಬಿ ಹಾಗೂ 59/ಬಿ/2 ಮನೆಗಳು ಸಹ ನನ್ನ ಅಜ್ಜನಿಗೆ ಅವರ ಮತ್ತು ಅವರ ಸಹೋದರ ನಡುವೆ ಆದ ಪಾಲಿನಲ್ಲಿ ಬಂದಂತಹ ಆಸ್ತಿಗಳು ಎಂದರೆ ಸರಿ. ನಮ್ಮ ಅಜ್ಜ ಜೀವಿತ ಇದ್ದಾಗ ನನ್ನ ತಂದೆ ವಾದಿ, ನನ್ನ ಚಿಕ್ಕಪ್ಪ ಹಾಗೂ ನನ್ನ ಸೋದರ ಅತ್ತೆ 9ನೇ ಪ್ರತಿವಾದಿ ದಾವಾ ಆಸ್ತಿಯ ಜಂಟಿ ಕಬ್ಜೆಯಲ್ಲಿ ಇದ್ದರು ಎಂದರೆ ಸರಿ.

4. ನನ್ನ ಲಿಖಿತ ಹೇಳಿಕೆಯಲ್ಲಿ, ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಯಾವ ದಿನಾಂಕದಂದು ಬಾಯಿ ಮಾತಿನ ಮುಖಾಂತರ ವಾಟ್ನಿ ಆಗಿದೆ ಎಂದು ಬರೆಯಿಸಿಲ್ಲ ಎಂದರೆ ಸರಿ. ಅದೇ ರೀತಿ ಬಾಯಿ ಮಾತಿನಲ್ಲಿ ವಾಟ್ನಿ ಆದಾಗ ಹಿರಿಯರು ಇದ್ದರು ಎಂದು ಹೇಳಿದ್ದು ಅವರ ಹೆಸರು ಎಲ್ಲಿಯೂ ಹೇಳಿಲ್ಲ ಎಂದರೆ ಸರಿ. ಬಾಯಿ ಮಾತಿನಲ್ಲಿ ವಾಟ್ನಿಯಾದ ಪ್ರಕಾರ ಕಂದಾಯ ದಾಖಲೆಗಳಲ್ಲಿ ಯಾವುದೇ ದಾಖಲೆ ಬದಲಾವಣೆ ಆಗಿಲ್ಲ ಮತ್ತು ಡೈರಿಗಳು ಆಗಿಲ್ಲ.

5. ವಾದಿ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಹಾಗೂ ನನೆ ತಿಳುವಳಿಗೆ ಬಂದ ಮೇಲೆ ನನ್ನ ತಾಯಿಗೆ

ವಿಚಾರಿಸಿರುತ್ತೇನೆ, ಆಗ ನನ್ನ ತಾಯಿ ವಾದಿ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದುಕೊಟ್ಟಿದ್ದಾರೆ, ಯಾವಾಗ ಬರೆದುಕೊಟ್ಟಿದ್ದಾರೆ, ಆ ದಾಖಲೆಗೆ ಯಾರು ಯಾರು ಸಾಕ್ಷಿದಾರರು ಹಾಗೂ ಆ ದಾಖಲೆಗೆ ಯಾರು ಯಾರು ಸಹಿ ಮಾಡಿದ್ದಾರೆ ಎಂದು ನಾನು ವಿಚಾರಿಸಿಲ್ಲ ಹಾಗೂ ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ನಾನು ನೋಡಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 4ನೇ ಖಂಡಿಕೆಯಲ್ಲಿ ಹೇಳಿರುವ ಎಲ್ಲ ವಿಷಯಗಳಿಗೆ ಯಾವುದೇ ಅಧಾರ ಇರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ಅಜ್ಜ ತೀರಿಕೊಂಡ ನಂತರ ನನ್ನ ಅಜ್ಜಿ, ನನ್ನ ತಂದೆ, ವಾದಿ, ನನ್ನ ಚಿಕ್ಕಪ್ಪ ಹಾಗೂ 9ನೇ ಪ್ರತಿವಾದಿಯ ನಡುವೆ ಯಾವುದೇ ವಾಟ್ನಿ ಆಗದೇ ಸರ್ವೆ ನಂ.493/1 ರ 01ಎಕರೆ ಜಮೀನನ್ನು ಪ್ರತಿವಾದಿ 10 ಮತ್ತು 11 ರವರಿಗೆ ನನ್ನ ತಂದೆ ಶಿವಲಿಂಗಪ್ಪ, ನನ್ನ ಚಿಕ್ಕಪ್ಪ ಸಿದ್ದಪ್ಪ ಹಾಗೂ ನನ್ನ ಅಜ್ಜಿ ನಾಗವ್ವ ದಿನಾಂಕ 22/05/2007 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿ. 2007ರಲ್ಲಿ ನಾನು, ಪ್ರತಿವಾದಿ 3 ಹಾಗೂ 6 ರಿಂದ 8 ಅಪ್ರಾಪ್ತ ವಯಸ್ಕರಿದ್ದೇವು ಎಂದರೆ ಸರಿ. ಈ ದಾವೆ ಮಾಡಿದ ನಂತರ ಸರ್ವೆ ನಂ.493/1 ರಲ್ಲಿಯ 01ಎಕರೆ ಜಮೀನನ್ನು ಪ್ರತಿವಾದಿ 10 ಮತ್ತು 11 ರವರಿಗೆ ಮಾರಾಟ ಮಾಡಲಾಗಿದೆ ಎಂದು ನಮಗೆ ಗೊತ್ತಾಗಿರುತ್ತದೆ. ನಮಗೆ ಈ ವಿಷಯ ಗೊತ್ತಾದ ನಂತರ ಪ್ರತಿವಾದಿ 10 ಮತ್ತು 11 ರವರಿಗೆ 01ಎಕರೆ ಜಮೀನು ಮಾರಾಟ ಮಾಡಿರುವುದು ತಪ್ಪು ಇದೆ ಎಂದು ಹೇಳಿ ಪ್ರಶ್ನಿಸಿ ನಾವು ಯಾವುದೇ ಪ್ರಕರಣ ದಾಖಲಿಸಿಲ್ಲ.

7. ನಾವು ಮತ್ತು ಪ್ರತಿವಾದಿ 10 ಮತ್ತು 11 ರವರು ಕೂಡಿಯೇ ಈ ದಾವೆ ನಡೆಯಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಆಸ್ತಿಯ ಬಗ್ಗೆ ನಾವು ತಕರಾರು ಮಾಡಿದರೆ ವಾದಿಗೆ ಮಾರಾಟ ಮಾಡಿದ ಆಸ್ತಿಯಲ್ಲಿ ಪಾಲು ಹೋಗುತ್ತದೆ ಎಂದು ಹೇಳಿ ನಾವು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

8. ಎಲ್ಲ ದಾವಾ ಆಸ್ತಿಗಳಲ್ಲಿ ನಾವು, ನಮ್ಮ ಅಜ್ಜಿ ಹಾಗೂ ವಾದಿ ಎಲ್ಲರೂ ಜಂಟಿ ಕಬ್ಜಾ ವಹಿವಾಟಿಯಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ನನ್ನ ಅಜ್ಜ ಸತ್ತೆಪ್ಪ ಇವರು ಮೃತಪಟ್ಟ ನಂತರ ನನ್ನ ಅಜ್ಜಿ, ನನ್ನ ತಂದೆ, ವಾದಿ, ನನ್ನ ಚಿಕ್ಕಪ್ಪ ಸಿದ್ದಪ್ಪ ಹಾಗೂ ನಮ್ಮ ಅತ್ತೆ 9ನೇ ಪ್ರತಿವಾದಿ ಇವರ ನಡುವೆ ಸರಸ-ನಿರಸ ವಾಟ್ನಿ ಆಗಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಿಗೆ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಸಿದ್ದಪ್ಪ ಮಾಲೀಕರು ಇದ್ದಾರೆ ಎಂದು ಬರೆಯಿಸಿಲ್ಲ.

9. ಇಂದು ನನ್ನ ಜೊತೆ ಪ್ರತಿವಾದಿ 10 ಮತ್ತು 11 ಬಂದಿರುತ್ತಾರೆ ಎಂದರೆ ಸಾಕ್ಷಿದಾರರು ತಮ್ಮ ಜೊತೆ ಬಂದಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ 10 ಮತ್ತು 11 ರವರು ಹೇಳಿದ ಪ್ರಕಾರ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಜ್ಜನ ಮರಣಾ ನಂತರ ನನ್ನ ಅಜ್ಜಿ ಪ್ರತಿವಾದಿ 1, ನನ್ನ ತಂದೆ ಹಾಗೂ ಮೃತ ನನ್ನ ಚಿಕ್ಕಪ್ಪ ಸಿದ್ದಪ್ಪ ಇವರೆಲ್ಲರು ಸೇರಿಕೊಂಡು ವಾದಿ ಮತ್ತು 9ನೇ ಪ್ರತಿವಾದಿಗೆ ಗೊತ್ತಾಗದ ಹಾಗೆ ದಾವಾ ಆಸ್ತಿಗಳ ಉತಾರಗಳಲ್ಲಿ ತಮ್ಮ ಹೆಸರು ಹಚ್ಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ 1ನೇ ಪ್ರತಿವಾದಿಗೆ ಹಾಗೂ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಮೃತ ಸಿದ್ದಪ್ಪ ಇವರಿಗೆ ಯಾವುದೇ ಹಕ್ಕು

ಹಿತಾಸಕ್ತಿ ಇಲ್ಲದೇ ಸರ್ವೆ ನಂ.493/1 ರಲ್ಲಿಯ 01ಎಕರೆ ಜಮೀನನ್ನು ಪ್ರತಿವಾದಿ 10 ಮತ್ತು 11 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

10. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಇನ್ನೂ ಆಸ್ತಿಗಳಿದ್ದರೂ ಸಹ ಅವುಗಳನ್ನು ಬಿಟ್ಟು ಈ ದಾವೆ ಮಾಡಿದ್ದಾರೆ ಎಂದು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟು ಬರೆಯಿಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೆ ನಂ.384/4ಬ+9ಅ ಗೆ ಸಂಬಂಧಪಟ್ಟ 02ಎ-29ಗು-08ಅಣೆ ಆಸ್ತಿಗೆಗೆ ಸಂಬಂಧಪಟ್ಟ ಹಾಗೆ ಖರೀದಿ ಕರಾರ ಪತ್ರ ಆದ ಬಗ್ಗೆ ಹಾಗೂ ಅದಕ್ಕೆ ಸಂಬಂಧಪಟ್ಟಂತೆ ದಾವೆ ಆದ ಬಗ್ಗೆ ನಾನು ಹೇಳಿ ಬರೆಯಿಸಿಲ್ಲ. ಅದೇ ರೀತಿ ಸದರಿ ಆಸ್ತಿಗೆ ಸಂಬಂಧಪಟ್ಟ ಹಾಗೆ ಒಂದು ದಾವೆ ಆಗಿ ನ್ಯಾಯಾಲಯದಲ್ಲಿ ಮುಕ್ತಾಯ ಆಗಿದೆ ಎಂದು ನಾನು ಹೇಳಿ ಬರೆಯಿಸಿಲ್ಲ.

11. ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು ಕೊಡಬೇಕಾಗುತ್ತದೆ ಎಂದು ಹೇಳಿ ನಾವು ಹಾಗೂ ಪ್ರತಿವಾದಿ 10 ಮತ್ತು 11 ರವರು ಸೇರಿಕೊಂಡು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು

ಕೊಡಬೇಕಾಗುತ್ತದೆ ಎಂದು ಹೇಳಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. .

12. ನಾನು ಹಾಜರಪಡಿಸಿರುವ ದಾಖಲೆಗಳೆಲ್ಲವೂ ದಿಃ 18/12/2020 ರಂದು ತೆಗೆದುಕೊಂಡಿದ್ದೇನೆ ಎಂದರೆ ಸರಿ. ದಿನಾಂಕ 18/12/2020 ರಿಂದ ದಿಃ18/02/2026 ರವರೆಗು ಸದರಿ ದಾಖಲೆಗಳು ನನ್ನ ಬಳಿ ಇದ್ದವು ಎಂದರೆ ಸರಿ. ಸದರಿ ದಾಖಲೆಗಳನ್ನು 2020 ರಲ್ಲಿ ನಾವು ಈ ದಾವೆಯಲ್ಲಿ ನಮ್ಮ ವಕೀಲರ ಮುಖಾಂತರ ಹಾಜರಾದಾಗ ಸದರಿ ದಾಖಲೆಗಳನ್ನು ಹಾಜರಪಡಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ.

13. ನನ್ನ ತಂದೆ ಮತ್ತು ಚಿಕ್ಕಪ್ಪ ಇವರ ಮರಣಾ ನಂತರ ಈ ಹೊತ್ತಿನವರೆಗೂ ನಾವು, ವಾದಿ, ನನ್ನ ಅಜ್ಜಿ ಹಾಗೂ ಪ್ರತಿವಾದಿ 6 ರಿಂದ 9 ದಾವಾ ಆಸ್ತಿಗಳ ಜಂಟಿ ಕಬ್ಜೆಯಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ನನ್ನ ಅಜ್ಜಿ, ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಸಿದ್ದಪ್ಪ ಇವರ ನಡುವೆ ದಾವಾ ಆಸ್ತಿಗಳಲ್ಲಿ ವಾಟ್ನಿ ಆಗದೇ ಪ್ರತಿವಾದಿ 10 ಮತ್ತು 11 ರವರಿಗೆ ಒಂದು ಸುಳ್ಳು ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ